# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ವಾರ್ಡ್ ಸಂಖ್ಯೆ.27/100 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 07-01-2023 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು***

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ವಿನೋದ್.ಕೆ.ಎಂ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಶಂಕರಪ್ಪ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು, ವಾರ್ಡ್ ಸಂಖ್ಯೆ.27/100
3. ಶ್ರೀ ಸಂದೀಪ್.ಎಸ್, ಸಹಾಯಕ ಅಭಿಯಂತರರು
4. ಶ್ರೀ ಪರಶುರಾಮ್.ಬಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್, ರಾಮಮೂರ್ತಿ ನಗರ ಪೊಲೀಸ್ ಠಾಣೆ
5. ಶ್ರೀ ಅಮಿತ್ ಎ.ಪಿ ಸಹಾಯಕ ಅಭಿಯಂತರರು (ಬೀದಿ ದೀಪಗಳ ನಿರ್ವಹಣೆ ವಿಭಾಗ)
6. ಶ್ರೀ ದುರ್ಗಾ ಪ್ರಸಾದ್ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೀದಿ ದೀಪಗಳ ನಿರ್ವಹಣೆ ವಿಭಾಗ)
7. ಮಿಸ್. ಆಯೇಶಾ ಸಹಾಯಕ ಅಭಿಯಂತರರು (ಬೃಹತ್ ನೀರುಗಾಲುವೆ-SWD)
8. ಶ್ರೀ ರಾಯಪ್ಪ, ಹಿರಿಯ ಆರೋಗ್ಯ ಪರಿವೀಕ್ಷಕರು, ಬಾಣಸವಾಡಿ
9. ಶ್ರೀ ಮಂಜುನಾಥ, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ
10. ಶ್ರೀ ಕೆ. ಶಿವಯ್ಯ, ಕೆಲಸ ಪರಿವೀಕ್ಷಕರು, ಬಿಡಬ್ಲ್ಯೂ.ಎಸ್.ಎಸ್.ಬಿ

**ಹಾಜರಿದ್ದ ಸದಸ್ಯರು/ ಸ್ಥಳೀಯ ನಿವಾಸಿಗಳು**

1. ಶ್ರೀ ಅಮಿತ್ ನಿಗ್ಲಿ, ಸ್ಥಳೀಯರು ಬಾಣಸವಾಡಿ
2. ಶ್ರೀಮತಿ ಮಣಿ ಮೇಘಲೈ, ಸ್ಥಳೀಯರು ಬಾಣಸವಾಡಿ
3. ಶ್ರೀ ಕರ್ನಲ್ ಗೋಪ್‌ಡೆ, ಸ್ಥಳೀಯರು ಬಾಣಸವಾಡಿ
4. ಶ್ರೀ ಶ್ರೀಧರ, ಸ್ಥಳೀಯರು ಬಾಣಸವಾಡಿ

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರುರವರು ಸ್ವಾಗತವನ್ನು ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ |
|---|---|---|
| 1 | ವಾರ್ಡ್ ವ್ಯಾಪ್ತಿಯ ಒ.ಎಂ.ಬಿ.ಆರ್ ಲೇಔಟ್‌ನಲ್ಲಿನ ಈಜುಕೊಳದ ಬಳಿ ಸ್ವಚ್ಛತೆಯಾಗಿಲ್ಲದಿರುವುದರಿಂದ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿರುವ ಕಾರಣ ಈಜು ಕೊಳದ ಬಳಿ ಸ್ವಚ್ಛತೆಯನ್ನು ಮಾಡಿಸಿ ಪಂಪ್ ಔಟ್ ಮಾಡಿಸಬೇಕಾಗಿ ಸಭೆಯಲ್ಲಿ ಅಮತ್ ನಿಗ್ಲಿರವರು ಸೂಚಿಸಿದರು. | ಆರೋಗ್ಯ ವೈಧ್ಯಾಧಿಕಾರಿಗಳು/<br>ಹಿರಿಯ ಆರೋಗ್ಯ ಪರಿವೀಕ್ಷಕರು/ ಮತ್ತು ಕಾಮಗಾರಿ ಇಲಾಖೆ<br>ಸರ್ವಜ್ಞನಗರ ವಿಭಾಗ<br>**MOH/SHI/AE** |

| | | |
|---|---|---|
| 2 | ಎ) ವಾರ್ಡ್ ವ್ಯಾಪ್ತಿಯ ಹೆಚ್.ಆರ್.ಬಿ.ಆರ್ ಲೇಔಟ್, 2ನೇ ಕೆ ಕ್ರಾಸ್ ನಲ್ಲಿ ಆಯ್ದ ಭಾಗಗಳಲ್ಲಿ ರಸ್ತೆ ಹಾಳಾಗಿದ್ದು ವಾಹನ ಸವಾರರಿಗೆ ಓಡಾಡಲು ತೊಂದರೆಯಾಗುತ್ತಿರವುದರಿಂದ, ಈ ರಸ್ತೆಯು DLP ಅವಧಿಯಲ್ಲಿದ್ದು, ಸದರಿ ರಸ್ತೆಯ ಆಯ್ದ ಭಾಗಗಳಲ್ಲಿ ಪುನಶ್ಚೇತನಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲು ಕರ್ನಲ್ ಗೋರ್ಪಡೆಯವರು ಸಭೆಯಲ್ಲಿ ಕೋರಿದರು.<br><br>ಬಿ) ವಾರ್ಡ್ ವ್ಯಾಪ್ತಿಯ ಪಲ್ಲೋಟಿ ಚರ್ಚ್ ಬಳಿ ಒಂದು ತೆಂಗಿನಮರವು ಹೆಮ್ಮರವಾಗಿ ಬೆಳೆದು ನಿಂತಿದ್ದು, ಮಳೆ ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ ವಾದ್ದರಿಂದ ಆ ಮರದ ಸುತ್ತಲು ಪಾತಿ ಕಟ್ಟಿ ನೀರು ಸರಾಗವಾಗಿ ಹರಿಯುವಂತೆ ಸ್ಥಳಾಂತರಿಸಬೇಕಾಗಿ ಅಮಿತ್ ನಿಗ್ಲಿರವರು ಸಭೆಯಲ್ಲಿ ಸೂಚಿಸಿದರು.<br><br>ಸಿ) ವಾರ್ಡ್ ವ್ಯಾಪ್ತಿಯಲ್ಲಿ ಸಿಸಿ ಟಿವಿಗಳ ಪರಿಶೀಲನೆ ಹಾಗೂ ಅದರ ಉಸ್ತುವಾರಿ ಯಾರ ಬಳಿ ಇದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕಾಗಿ ಕರ್ನಲ್ ಗೋರ್ಪಡೆಯವರು ಸಭೆಯಲ್ಲಿ ಪ್ರಸ್ತಾಪಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 3 | ವಾರ್ಡ್ ವ್ಯಾಪ್ತಿಯ ಲಕ್ಷ್ಮಮ್ಮ ಲೇಔಟ್‌ನಲ್ಲಿ ಪೋಲೀಸ್ ಸಿಬ್ಬಂದಿಯವರು ರಾತ್ರಿಯ ವೇಳೆ ಪೋಲೀಸ್ ಬೀಟ್ ಮಾಡತ್ತಿಲ್ಲವಾದ್ದರಿಂದ ಭುವನಗಿರಿ ಗ್ರೌಂಡ್ ಬಳಿ ಕಳ್ಳತನಗಳು ಹೆಚ್ಚಾಗಿರುವುದರಿಂದ ಅದರ ಬಗ್ಗೆ ಸಂಭಂದಪಟ್ಟ ಅಧಿಕಾರಿಗಳು ಗಮನ ಹರಿಸಬೇಕಾಗಿ ಅಮಿತ್ ನಿಗ್ಲಿರವರು ಸಭೆಯಲ್ಲಿ ತಿಳಿಸಿದರು. | **Ramamurthy Nagar Police Station**<br>**Ramamurthy Nagar**<br>**(Law & Order Department)** |
| 5 | ಎ) ವಾರ್ಡ್ ವ್ಯಾಪ್ತಿಯ 4ನೇ ಅಡ್ಡರಸ್ತೆ ಹೆಚ್‌ಆರ್‌ಬಿಆರ್ ಲೇಔಟ್‌ನಲ್ಲಿ ಬೀದಿ ದೀಪಗಳ ವೈರ್‌ಗಳು ಹಾಗೂ ಲೈಟ್‌ಗಳು ಸಮರ್ಪಕವಾಗಿ ಉರಿಯುವಂತೆ ಮಾಡಿದ ಕಾರಣ ಧನ್ಯವಾದಗಳನ್ನು ವ್ಯಕ್ತಪಡಿಸುತ್ತಾ ಸಬ್‌ರಿಜಿಸ್ಟರ್ ಕಛೇರಿಯ 2ನೇ ಕ್ರಾಸ್, 100 ಅಡಿ ರಸ್ತೆ, ಇಂದಿರಾ ಕ್ಯಾಂಟೀನ್ ರಸ್ತೆಗಳಲ್ಲಿನ ಬೀದಿ ದೀಪಗಳು ಸಮರ್ಪಕವಾಗಿ ಉರಿಯುತ್ತಿಲ್ಲವಾದ ಕಾರಣ ಆ ರಸ್ತೆಗಳಲ್ಲಿ ಬೀದಿ ದೀಪಗಳ ಬಗ್ಗೆ ಗಮನ ಹರಿಸಬೇಕಾಗಿ ಅಮಿತ್ ನಿಗ್ಲಿ ರವರು ಸಭೆಯಲ್ಲಿ ಸೂಚಿಸಿದರು. ಹಾಗೂ ರಾತ್ರಿ ವೇಳೆಯಲ್ಲಿ ರಸ್ತೆಗಳನ್ನು ಪರಿಶೀಲನೆ ಮಾಡಿ ಬೀದಿದೀಪಗಳ ಕುಂದು ಕೊರತೆಗಳನ್ನು ಅಧಿಕಾರಿಗಳು ಪರಿಗಣಿಸಿ ಸರಿಪಡಿಸ ಬೇಕಾಗಿ ಅಮಿತ್ ನಿಗ್ಲಿ ರವರು ಸಭೆಯಲ್ಲಿ ತಿಳಿಸಿದರು.<br><br>ಬಿ) ವಾರ್ಡ್ ವ್ಯಾಪ್ತಿಯ ಮಿಲಿಟರಿ ಗ್ಯಾರಿಸನ್ ರಸ್ತೆಯಿಂದ ಫ್ಲೈ ಓವರ್‌ವರೆಗೆ ಬೀದಿ ದೀಪಗಳು ಇಲ್ಲದಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆ ಆಗುತ್ತಿರುವುದರಿಂದ ಹೊಸ ದೀಪಗಳ ಸಮರ್ಪಕವಾಗಿ ಅಳವಡಿಸಬೇಕಾಗಿ ಶ್ರೀಮತಿ ಮಣಿಮೇಘಲೈ ರವರು ಸಭೆಯಲ್ಲಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಉಪ ವಿಭಾಗ–ಪೂರ್ವ ವಲಯ |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುವ ವಿದ್ಯುತ್ ಉಪ ವಿಭಾಗ ಮತ್ತು ವಲಯ ಅರಣ್ಯಾಧಿಕಾರಿಗಳು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸೂಚಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

<u>ಪ್ರತಿಯನ್ನು</u>

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ.